**ಚಾಸಾ-04**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ** 5045/2024 ಪ್ರಾಸಾ-04
ಚಾಸಾ-04

ದಿನಾಂಕಃ 17-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಾಘವೇಂದ್ರ |
| **ತಂದೆಯ / ಗಂಡನ ಹೆಸರು** | ಒಬಲೇಶಪ್ಪ |
| **ವಯಸ್ಸು** | 35 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ರಾಯವಾರ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಚಾಸಾ-1 ನನ್ನ ತಮ್ಮ. ಚಾಸಾ-1 ಮಿಲ್ಟ್ರಿ ಜಮ್ಮು ಕಾಶ್ಮಿರ ಭೂ ಸೇನೆಯಲ್ಲಿ ಕೆಲಸ ಮಾಡುತ್ತಾನೆ. 2024 ನೇ ಬೇಸಿಗೆ ಕಾಲದಲ್ಲಿ ರಜೆ ತೆಗೆದುಕೊಂಡು ನಮ್ಮ ಊರಿಗೆ ಬಂದಿದ್ದ. ಬೈರೇನಹಳ್ಳಿ ಕ್ರಾಸ್ ನಲ್ಲಿರುವ ಎನ್.ಟಿ.ಆರ್. ಬಾರ್ ಅಂಡ್ ರೆಸ್ಟೊರೆಂಟ್ ಗೆ ರಾತ್ರಿ-8-30 ಗಂಟೆಗೆ ಹೋಗಿದ್ದ. ರಾತ್ರಿ 10-00 ಗಂಟೆಗೆ ನಮ್ಮ ಊರಿನವರು ಯಾರೋ ಪೋನ್ ಮಾಡಿ ಚಾಸಾ-1 ಕಂಠಪೂರ್ತಿ ಮದ್ಯಪಾನ ಮಾಡಿರುತ್ತಾನೆಂದು ತಿಳಿಸಿರುತ್ತಾರೆ. ನಾನು ಹೋಗಿ ಆತನನ್ನು ಮನೆಗೆ ಕರೆದುಕೊಂಡು ಬಂದಿರುತ್ತೇನೆ. ಆ ದಿನ ಯಾವುದೇ ಗಲಾಟೆ ಆಗಿರುವುದಿಲ್ಲ ಯಾರು ಆತನ ಮೇಲ್ಲೆ ಹಲ್ಲೆ ಮಾಡಿರುವುದಿಲ್ಲ ನನಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ , ಅವರು ಏನು ತಪ್ಪು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 21.05.2024 ರಂದು ರಾತ್ರಿ 9-45 ಗಂಟೆಗೆ ಯಾರೋ ಫೋನ್ ಮಾಡಿ ಎನ್.ಟಿ.ಆರ್. ಬಾರ್ ಅಂಡ್ ರೆಸ್ಟೂರೆಂಟ್ ಬಳಿ ಚಾಸಾ-1 ರವರ ಮೇಲೆ ಆರೋಪಿತರು ಬೀರ್ ಬಾಟಲುಗಳಿಂದ ಚಾಸಾ-1 ರವರ ತಲೆಗೆ ಹೊಡೆದಿದ್ದಾರೆಂದು ತಿಳಿಸಿದ್ದು, ನಾನು ಅಲ್ಲಿಗೆ ಹೋಗಿ ನೋಡಲಾಗಿ ನನ್ನ ತಮ್ಮನ ತಲೆಯಲ್ಲಿ ರಕ್ತಗಾಯವಾಗಿತ್ತು , ನಾನು ಆತನನ್ನು ವಿಚಾರಿಸಿದಾಗ ಆರೋಪಿತರು ತನ್ನ ಜೊತೆ ಗಲಾಟೆ ಮಾಡಿ ಕೊಲೆ ಮಾಡಬೇಕೆಂಬ ಉದ್ದೇಶದಿಂದ ಬೀರ್ ಬಾಟಲಿನಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿರುತ್ತಾರೆ , ನಾನು ಕಿರುಚಿಕೊಂಡಾಗ ನವೀನ್ ಕುಮಾರ್ ಮತ್ತು ಚಿಕ್ಕಣ್ಣ ಹತ್ತಿರಕ್ಕೆ ಬಂದಿದ್ದು ಆಗ ಆರೋಪಿತರು ಓಡಿ ಹೋದರು ಎಂದು ತಿಳಿಸಿದ , ನಾನು ಆತನನ್ನು ನನ್ನ ಬೈಕಿನಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತೇನೆಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- 1 ಮತ್ತು 2 ರಿಂದ 5 ನೇ ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**